# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 721 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.03.2026 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿ ಕಳಪೆ ಗುಣಮಟ್ಟದ್ದಾಗಿದ್ದು, ಅನೇಕ ಕಾಮಗಾರಿಗಳು ಮಳೆಗಾಲದಲ್ಲಿ ಕುಸಿದು ಬಿದ್ದು ಅಪಾರ ಹಾನಿಗಳು ಉಂಟಾಗಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಸ್ಮಾರ್ಟ್ ಸಿಟಿ ಅಭಿಯಾನದಡಿ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಒಟ್ಟು 56 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಪೈಕಿ 54 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ 2 ಕಾಮಗಾರಿಗಳು ಪ್ರಗತಿಯಲ್ಲಿವೆ. ಪ್ರಗತಿಯಲ್ಲಿರುವ ಕಾಮಗಾರಿಗಳ ಪೈಕಿ ಸಮುದ್ರ ಕಿನಾರೆ ಪ್ರದೇಶ ಅಭಿವೃದ್ಧಿಯ ಕಾಮಗಾರಿಯು (Water Front Projects) ಸೇರಿದ್ದು ಈ ಕಾಮಗಾರಿಯಲ್ಲಿ ಮಾತ್ರ ತಡೆ ಗೋಡೆಗೆ ಅಲ್ಪ ಮಾತ್ರದ ಹಾನಿಯಾಗಿದ್ದು ಉಳಿದ ಯಾವುದೇ ಕಾಮಗಾರಿಗಳಲ್ಲಿ ಮಳೆಗಾಲದಲ್ಲಿ ಹಾನಿಯಾಗಿರುವುದಿಲ್ಲ.<br><br>ಸ್ಮಾರ್ಟ್ ಸಿಟಿ ಅಭಿಯಾನದಡಿ ಸಮುದ್ರ ಕಿನಾರೆ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಪೈಕಿ Waterfront Promenade ಕಾಮಗಾರಿಯು ಒಂದಾಗಿದ್ದು, ಸದರಿ ಕಾಮಗಾರಿಗೆ ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರವು Coastal Regulation Zone ಷರತ್ತಿಗೆ ಒಳಪಟ್ಟು ಅನುಮೋದನೆ ನೀಡಿರುತ್ತದೆ.<br><br>• ಅದರಂತೆ Un coursed rubble masonry ಮೂಲಕ ನದಿ ಬದಿ ಕಡೆಗೆ ತಡೆಗೋಡೆ ನಿರ್ಮಿಸಲಾಗುತ್ತಿದ್ದು, ಈಗಾಗಲೇ ಸದರಿ ಭಾಗದಲ್ಲಿ 714ಮೀ. ತಡೆಗೋಡೆ ನಿರ್ಮಾಣಗೊಂಡಿದ್ದು ಅದರಲ್ಲಿ ಸುಮಾರು 15ಮೀ ಉದ್ದ ತಡೆಗೋಡೆ ಮಾತ್ರ ಕುಸಿದಿದೆ.<br>• Water Front Promenade ಕಾಮಗಾರಿಯಲ್ಲಿ ಪಾದಚಾರಿ ಮಾರ್ಗ, ಸೈಕಲ್ ಮಾರ್ಗ ಹಾಗೂ ಇತರೆ ಮೂಲ ಸೌಕರ್ಯಗಳನ್ನು ನಿರ್ಮಾಣ ಮಾಡುವ ಪೂರ್ವದಲ್ಲಿ ನೆಲವನ್ನು ಅವಶ್ಯಕ ಎತ್ತರಕ್ಕೆ ಮಟ್ಟ ಮಾಡಲು ನದಿಯ ಅಂಚಿನಲ್ಲಿ Layer by Layer ಮಣ್ಣನ್ನು compact ಮಾಡಬೇಕಾಗಿರುತ್ತದೆ. ಇದಕ್ಕಾಗಿ ತಡೆಗೋಡೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ಕಾಮಗಾರಿ ಪ್ರದೇಶದಲ್ಲಿ ಗುತ್ತಿಗೆದಾರರು ಮಣ್ಣನ್ನು ಶೇಕರಣೆ ಮಾಡಿದ್ದು, ಈ ನಡುವೆ ಮಾನ್ಯ ಹಸಿರು ನ್ಯಾಯ ಮಂಡಳಿಯು ನದಿ ಭಾಗದಲ್ಲಿ ಯಾವುದೇ ಕಾಮಗಾರಿ ನಡೆಸದಂತೆ ತಡೆಯಾಜ್ಞೆ ನೀಡಿರುವ ಕಾರಣ, ಮಣ್ಣನ್ನು ಹರಡಿ compact ಮಾಡಲು ಆಗಿರುವುದಿಲ್ಲ.<br>• ಸದರಿ ಪ್ರದೇಶದಲ್ಲಿ ದಿನಾಂಕ 20/05/2024 ರಿಂದ 08/06/2024 ವರೆಗೆ ಅತೀ ಹೆಚ್ಚಿನ ಮಳೆಯಾಗಿದ್ದು, ಪ್ರಾಕೃತಿಕವಾಗಿ ಹೆಚ್ಚಿನ ಮಳೆ ನೀರು ಈ ಭಾಗದಿಂದ ಹರಿದು ಬಂದಿದ್ದು, ಶೇಕರಣೆ ಮಾಡಲಾಗಿರುವ ಮಣ್ಣು ತಡೆಗೋಡೆ ಕಡೆಗೆ ರಭಸವಾಗಿ ಹರಿದ |

| | | |
|---|---|---|
| | | ಕಾರಣ 15 ಮೀ ತಡೆಗೋಡೆ ಕುಸಿದಿರುತ್ತದೆ ಮತ್ತು ಮಾನ್ಯ ಹಸಿರು ನ್ಯಾಯ ಮಂಡಳಿಯಲ್ಲಿ ಕಾಮಗಾರಿಗೆ ತಾತ್ಕಾಲಿಕ ತಡೆಯಾಜ್ಞೆ ಇರುವುದರಿಂದ ಕುಸಿದ ತಡೆಗೋಡೆ ಪುನರ್ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಕಷ್ಟ ಸಾಧ್ಯವಾಗಿದೆ. ಆದಾಗ್ಯೂ ಹಾನಿಯಾಗಿರುವ ಭಾಗದಲ್ಲಿ ಜನರ ಓಡಾಟ ನಿಯಂತ್ರಿಸಲು ಹಾಗೂ ಸುರಕ್ಷತೆ ದೃಷ್ಟಿಯಿಂದ Barricade ಗಳನ್ನು ಒದಗಿಸಲಾಗಿದೆ.<br><br>ಕಾಮಗಾರಿಗೆ ಮಾನ್ಯ ಹಸಿರು ನ್ಯಾಯ ಮಂಡಳಿಯ ತಡೆಯಾಜ್ಞೆ ಇರುವ ಕಾರಣ ಹಾಗೂ ಅತಿ ಹೆಚ್ಚು ಮಳೆಯಿಂದಾಗಿ 15 ಮೀ ಉದ್ದದ ತಡೆಗೋಡೆ ಮಾತ್ರ ಕುಸಿದಿದ್ದು, ಕಳಪೆ ಕಾಮಗಾರಿಯಿಂದಾಗಿ ಕುಸಿದು ಬಿದ್ದಿರುವುದಿಲ್ಲ. |
| ಆ) | ಸ್ಮಾರ್ಟ್ ಸಿಟಿ ಮೂಲ ಉದ್ದೇಶವನ್ನು ಬಿಟ್ಟು ರಸ್ತೆ ಮತ್ತು ಚರಂಡಿಗಳಿಗೆ ಹಣ ವಿನಿಯೋಗಿಸಲಾಗಿದೆ ಎಂಬ ದೂರುಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು; | ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿಗಳ ಅನುಸಾರ ಗುರುತಿಸಲಾದ ಪ್ರಮುಖ ಮೂಲಭೂತ ಸೌಕರ್ಯಗಳು (Core Infrastructure Elements) ಈ ಕೆಳಗಿನಂತಿವೆ:<br>• ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ<br>• ಉದ್ಯಾನವನಗಳ ಅಭಿವೃದ್ಧಿ<br>• ಕೆರೆ ಹಾಗೂ ನದಿ ಪ್ರದೇಶಗಳ ಅಭಿವೃದ್ಧಿ<br>• ಒಳಚರಂಡಿ ಕಾಮಗಾರಿಗಳು<br>• ಮಾರುಕಟ್ಟೆಗಳ ಪುನರ್ ನವೀಕರಣ<br>• Integrated Command & Control Center ಮತ್ತು ICT ಆಧಾರಿತ ಸೇವೆಗಳು<br>• ಕ್ರೀಡಾಂಗಣ/ಈಜುಕೊಳಗಳ ಅಭಿವೃದ್ಧಿ<br>• ಪಾರ್ಕಿಂಗ್ ಪ್ರದೇಶಗಳ ಅಭಿವೃದ್ಧಿ<br>• ಘನ ತ್ಯಾಜ್ಯ ನಿರ್ವಹಣೆ<br><br>ಅದರಂತೆ, ಮಂಗಳೂರು ಸ್ಮಾರ್ಟ್ ಸಿಟಿ ಪ್ರಸ್ತಾವನೆಯಲ್ಲಿ ನಗರದ ಮೂಲಸೌಕರ್ಯ ಸೌಲಭ್ಯಗಳ ಅಭಿವೃದ್ಧಿಗೆ ಹಾಗೂ ನಾಗರೀಕರ ಜೀವನ ಮಟ್ಟ ಸುಧಾರಣೆಗೆ ಪೂರಕವಾದ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಸದರಿ ಪ್ರಸ್ತಾವನೆಗೆ ಮಂಗಳೂರು ಮಹಾನಗರ ಪಾಲಿಕೆ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದ ನಂತರವೇ ಅನುಷ್ಠಾನಗೊಳಿಸಲಾಗುತ್ತಿದೆ.<br><br>ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಹೊರತು ಪಡಿಸಿ Wenlock ಸರ್ಕಾರಿ ಆಸ್ಪತ್ರೆಯ ಅಭಿವೃದ್ಧಿ, ಮಂಗಳಾ ಸ್ಟೇಡಿಯಂ ಹಾಗೂ ಒಲಿಂಪಿಕ್-FINA ಮಾನದಂಡದಂತೆ ಅಂತಾರಾಷ್ಟ್ರೀಯ ಮಟ್ಟದ ಈಜುಕೊಳದ ನಿರ್ಮಾಣ, 13 ಸರ್ಕಾರಿ ಶಾಲೆಗಳಲ್ಲಿ ಇ-ಸ್ಮಾರ್ಟ್ ಸ್ಕೂಲ್ ಸೌಲಭ್ಯ, ಗುಜ್ಜರಕೆರೆ ಹಾಗೂ ಕಾವೂರು ಕೆರೆ ಅಭಿವೃದ್ಧಿ, ಮಂಗಳಾದೇವಿ ದೇವಸ್ಥಾನದ ರಸ್ತೆ ಹಾಗೂ ವೆಂಕಟರಮಣ ದೇವಸ್ಥಾನದ ರಥಬೀದಿ ರಸ್ತೆ ಅಭಿವೃದ್ಧಿ, ಮಂಗಳಾದೇವಿ ಬಸ್ ಟರ್ಮಿನಲ್ ನಿರ್ಮಾಣ ಹೀಗೆ ಹಲವಾರು ಜನೋಪಯೋಗಿ ಪ್ರಮುಖ ಕಾಮಗಾರಿಗಳನ್ನೂ ಸಹ ಕೈಗೊಳ್ಳಲಾಗಿದೆ.<br><br>ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿಗಳ ಅನುಸಾರವೇ ಕಾಮಗಾರಿಗಳನ್ನು ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಕೈಗೊಳ್ಳಲಾಗಿದ್ದು ಕೇವಲ ರಸ್ತೆ ಮತ್ತು ಚರಂಡಿಗಳಿಗೆ ಹಣ ವಿನಿಯೋಗಿಸಿರುವುದಿಲ್ಲ. |

| | | |
|---|---|---|
| ಇ) | ಸ್ಮಾರ್ಟ್ ಸಿಟಿ ಯೋಜನೆ ಅನ್ವಯ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಂಡಿರುವ ಯೋಜನೆಗಳಾವುವು; ಅವುಗಳಿಗೆ ವಿನಿಯೋಗಿಸಿದ ಹಣ ಎಷ್ಟು? (ವಿವರ ನೀಡುವುದು) | ಸ್ಮಾರ್ಟ್ ಸಿಟಿ ಅಭಿಯಾನದಡಿ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಕೈಗೊಂಡಿರುವ ಕಾಮಗಾರಿಗಳು ಹಾಗೂ ಅವುಗಳಿಗೆ ವಿನಿಯೋಗಿಸಿದ ಮೊತ್ತದ ವಿವರಗಳನ್ನು **ಅನುಬಂಧ**ದಲ್ಲಿ ನೀಡಿದೆ. |

ನಅಇ 59 ಸಿಎಸ್ಎಸ್ 2026

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಅನುಬಂಧ

ಅನುಬಂಧ-1

**ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್**

**SCM Projects**

**ಪೂರ್ಣಗೊಂಡ ಕಾಮಗಾರಿಗಳು**

| ಕ್ರ.ಸಂ | ಕಾಮಗಾರಿಯ ಹೆಸರು | DPR ಮೊತ್ತ | ಟೆಂಡರ್ ಮೊತ್ತ | O&M Cost | ಒಟ್ಟು CAPEX+OPEX | ಕಾರ್ಯಾದೇಶ ನೀಡಿದ ದಿನಾಂಕ | ಟೆಂಡರ್ ಪ್ರಕಾರ ಕಾಮಗಾರಿ ಪೂರ್ಣಗೊಳಿಸಬೇಕಾದ ದಿನಾಂಕ | ಕಾಮಗಾರಿ ಪೂರ್ಣಗೊಂಡ ದಿನಾಂಕ | ಒಟ್ಟು ವೆಚ್ಚ | ಷರಾ |
|---|---|---|---|---|---|---|---|---|---|---|
| 1 | ಸರ್ಕಾರಿ ಕಟ್ಟಡಗಳಲ್ಲಿರುವ ದೀಪಗಳ ವ್ಯವಸ್ಥೆಗಳನ್ನು ಎಲ್‌ಇಡಿ ದೀಪಗಳಾಗಿ ಬದಲಾಯಿಸುವುದು | 2.00 | 1.91 | 0.00 | 1.91 | 04.02.2019 | 04.08.2019 | 30.09.2019 | 1.91 | ಕಾಮಗಾರಿಯು ಪೂರ್ಣಗೊಂಡಿದೆ. |
| 2 | ಗಡಿಯಾರ ಗೋಪುರ ನಿರ್ಮಾಣ | 0.90 | 0.65 | 0.00 | 0.65 | 08.02.2018 | 08.02.2018 | 30.09.2019 | 0.63 | ಕಾಮಗಾರಿಯು ಪೂರ್ಣಗೊಂಡಿದೆ. |
| 3 | ಸ್ಮಾರ್ಟ್ ರಸ್ತೆ ಪ್ಯಾಕೇಜ್ 1- ನೆಹರೂ ಮೈದಾನ ರಸ್ತೆಯ ಅಭಿವೃದ್ಧಿ ಕಾಮಗಾರಿ ಗಡಿಯಾರ ಗೋಪುರದಿಂದ ಎ.ಬಿ.ಶೆಟ್ಟಿ ವೃತ್ತದವರೆಗೆ | 6.16 | 1.22 | 0.00 | 1.22 | 20.06.2018 | 20.12.2018 | 31.01.2020 | 1.22 | ಕಾಮಗಾರಿಯು ಪೂರ್ಣಗೊಂಡಿದೆ. |
| 4 | ಪಾನ್ ಸಿಟಿಯಲ್ಲಿ ಸ್ಮಾರ್ಟ್ ಬಸ್ ಶೆಲ್ಟರ್ ಮತ್ತು ಇ-ಶೌಚಾಲಯಗಳ ನಿರ್ಮಾಣ – ಹಂತ 2 | 4.80 | 3.03 | 0.00 | 3.03 | 24.03.2018 | 24.09.2018 | 31.01.2020 | 3.03 | ಕಾಮಗಾರಿಯು ಪೂರ್ಣಗೊಂಡಿದೆ. |
| 5 | ಸ್ಮಾರ್ಟ್ ಸಿಟಿ ಕಛೇರಿಯ ಒಳಾಂಗಣ ವಿನ್ಯಾಸದ ಕೆಲಸ | 0.67 | 0.53 | 0.00 | 0.53 | 04.07.2019 | 31.10.2019 | 31.10.2019 | 0.53 | ಕಾಮಗಾರಿಯು ಪೂರ್ಣಗೊಂಡಿದೆ. |
| 6 | ಪಾನ್ ಸಿಟಿಯಲ್ಲಿ ಸ್ಮಾರ್ಟ್ ಬಸ್ ಶೆಲ್ಟರ್ ಮತ್ತು ಇ-ಶೌಚಾಲಯಗಳ ನಿರ್ಮಾಣ – ಹಂತ 1 | 4.60 | 0.89 | 0.00 | 0.89 | 09.07.2018 | 09.01.2019 | 15.03.2020 | 0.89 | ಕಾಮಗಾರಿಯು ಪೂರ್ಣಗೊಂಡಿದೆ. |
| 7 | ವೆನ್‌ಲಾಕ್ ಆಸ್ಪತ್ರೆಯ ಸೂಪರ್ ಸ್ಪೆಷಾಲಿಟಿ ಬ್ಲಾಕ್‌ನಲ್ಲಿ 37 ಬೆಡ್‌ನ ಐಸಿಯು ಪೂರೈಕೆ ಮತ್ತು ಸ್ಥಾಪನೆ | 3.47 | 3.42 | 0.00 | 3.42 | 30.04.2020 | 30.10.2020 | 30.05.2020 | 3.42 | ಕಾಮಗಾರಿಯು ಪೂರ್ಣಗೊಂಡಿದೆ. |
| 8 | ಎಬಿಡಿ ಪ್ರದೇಶದಲ್ಲಿ 100% ಭೂಗತ ಒಳಚರಂಡಿ ಜಾಲ- ಪ್ಯಾಕೇಜ್ 3 ಎ | 1.75 | 1.60 | 0.00 | 1.60 | 04.09.2020 | 04.03.2021 | 31.05.2021 | 1.60 | ಕಾಮಗಾರಿಯು ಪೂರ್ಣಗೊಂಡಿದೆ. |
| 9 | ಎಬಿಡಿ ಪ್ರದೇಶದಲ್ಲಿ 100% ಭೂಗತ ಒಳಚರಂಡಿ ಜಾಲ- ಪ್ಯಾಕೇಜ್ 3 ಬಿ | 1.25 | 1.25 | 0.00 | 1.25 | 04.09.2020 | 04.03.2021 | 31.05.2021 | 1.25 | ಕಾಮಗಾರಿಯು ಪೂರ್ಣಗೊಂಡಿದೆ. |
| 10 | ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಇ-ಸ್ಮಾರ್ಟ್ ಸ್ಕೂಲ್ ಅಳವಡಿಕೆ – ಪ್ಯಾಕೇಜ್ 2 (ಐ.ಸಿ.ಟಿ) | 5.00 | 2.00 | 1.33 | 3.33 | 14.02.2020 | 30.09.2020 | 31.03.2021 | 3.08 | ಕಾಮಗಾರಿಯು ಪೂರ್ಣಗೊಂಡಿದೆ. |
| 11 | ಪ್ರದೇಶ ಆಧಾರಿತ ಅಭಿವೃದ್ಧಿ ಪ್ರದೇಶದಲ್ಲಿ ಒಳಚರಂಡಿ ವಲಯ-4 (ಭಾಗ-I) | 5.00 | 2.94 | 0.00 | 2.94 | 23.06.2018 | 22.12.2018 | 15.06.2021 | 2.94 | ಕಾಮಗಾರಿಯು ಪೂರ್ಣಗೊಂಡಿದೆ. |
| 12 | ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಇ-ಸ್ಮಾರ್ಟ್ ಸ್ಕೂಲ್ ಅಳವಡಿಕೆ – ಪ್ಯಾಕೇಜ್ 1 (ಸಿವಿಲ್) | 11.99 | 11.60 | 0.00 | 11.60 | 21.08.2019 | 15.02.2021 | 30.09.2021 | 11.60 | ಕಾಮಗಾರಿಯು ಪೂರ್ಣಗೊಂಡಿದೆ. |
| 13 | ಗುಜ್ಜರಕೆರೆಯ ಪುನಶ್ಚೇತನಗೊಳಿಸುವಿಕೆ | 4.41 | 4.08 | 0.00 | 4.08 | 14.02.2020 | 14.02.2021 | 31.08.2021 | 4.08 | ಕಾಮಗಾರಿಯು ಪೂರ್ಣಗೊಂಡಿದೆ. |
| 14 | ಮಂಗಳೂರಿನ ಲೇಡಿ ಗೋಶನ್ ಆಸ್ಪತ್ರೆಯ ಕಟ್ಟಡದಲ್ಲಿ ಹೆಚ್ಚುವರಿ ಮಹಡಿ ನಿರ್ಮಾಣ | 3.00 | 2.16 | 0.00 | 2.16 | 24.06.2020 | 23.06.2021 | 31.08.2021 | 2.16 | ಕಾಮಗಾರಿಯು ಪೂರ್ಣಗೊಂಡಿದೆ. |
| 15 | ಸಮಗ್ರ ಆಸ್ತಿ ನಿರ್ವಹಣೆ ಮತ್ತು ನಗರ ಆಸ್ತಿ ಮಾಲೀಕತ್ವ ದಾಖಲೆ ಕಟ್ಟಡ | 5.00 | 3.86 | 0.00 | 3.86 | 13.02.2020 | 12.02.2021 | 12.11.2021 | 3.86 | ಕಾಮಗಾರಿಯು ಪೂರ್ಣಗೊಂಡಿದೆ. |
| 16 | ಕೌಶಲ್ಯ ಅಭಿವೃದ್ಧಿ ಮತ್ತು ಸುರಕ್ಷತೆಯ ತರಬೇತಿ ಕೇಂದ್ರ (ಕಟ್ಟಡ ನಿರ್ಮಾಣ ಮತ್ತು ತರಬೇತಿ) | 4.75 | 4.52 | 0.00 | 4.52 | 14.05.2020 | 13.05.2021 | 13.12.2021 | 4.52 | ಕಾಮಗಾರಿಯು ಪೂರ್ಣಗೊಂಡಿದೆ. |
| 17 | ನಿರ್ದೇಶನ ಮತ್ತು ನಿಯಂತ್ರಣ ಕೇಂದ್ರ ಅನುಸ್ಥಾಪನೆ ಹಂತ-I CAPEX & OPEX | 49.52 | 15.12 | 12.88 | 28.00 | 07.11.2018 | 30.06.2019 | 31.03.2022 | 20.53 | ಕಾಮಗಾರಿಯು ಪೂರ್ಣಗೊಂಡಿದೆ. |
| 18 | ವೆನ್ಲಾಕ್ ಆಸ್ಪತ್ರೆಯ ಉನ್ನತೀಕರಣ - ಮೂಲಸೌಕರ್ಯ | 5.83 | 5.38 | 0.00 | 5.38 | 06.06.2020 | 05.06.2021 | 30.04.2022 | 5.38 | ಕಾಮಗಾರಿಯು ಪೂರ್ಣಗೊಂಡಿದೆ. |
| 19 | ಕದ್ರಿ ಉದ್ಯಾನವನದ ರಸ್ತೆ ಹಾಗೂ ಉದ್ಯಾನವನದ ಆವರಣದ ಹೊರಗೆ ಸಮಗ್ರ ಅಭಿವೃದ್ಧಿ ಕಾಮಗಾರಿ | 12.00 | 12.46 | 0.00 | 12.46 | 18.02.2020 | 18.02 2022 | 31.05.2022 | 12.46 | ಕಾಮಗಾರಿಯು ಪೂರ್ಣಗೊಂಡಿದೆ. |
| 20 | ಕದ್ರಿ ಉದ್ಯಾನವನದ ರಸ್ತೆ ಹಾಗೂ ಉದ್ಯಾನವನದ ಆವರಣದ ಹೊರಗೆ ಸಮಗ್ರ ಅಭಿವೃದ್ಧಿ ಕಾಮಗಾರಿ ಹಂತ-2 | 4.50 | 4.87 | 0.00 | 4.87 | 16.12.2021 | 15.12 2022 | 31.12.2022 | 4.87 | ಕಾಮಗಾರಿಯು ಪೂರ್ಣಗೊಂಡಿದೆ. |

| | | | | | | | | | | |
|---|---|---|---|---|---|---|---|---|---|---|
| 21 | ಮಂಗಳಾದೇವಿ ರಸ್ತೆಯಲ್ಲಿ ವಿದ್ಯುತ್ ಭೂಗತ ಕೇಬಲ್ ಕಾಮಗಾರಿ | 4.45 | 3.65 | 0.00 | 3.65 | 16.02.2022 | 16.08.2022 | 10.08.2022 | 3.65 | ಕಾಮಗಾರಿಯು ಪೂರ್ಣಗೊಂಡಿದೆ. |
| 22 | ಸ್ಮಾರ್ಟ್ ರಸ್ತೆ ಪ್ಯಾಕೇಜ್-9 ಭೂಗತ ಪಾದಚಾರಿ ಮಾರ್ಗ ನಿರ್ಮಾಣ | 6.00 | 6.67 | 0.00 | 6.67 | 20.09.2019 | 15.02.2021 | 30.09.2022 | 6.67 | ಕಾಮಗಾರಿಯು ಪೂರ್ಣಗೊಂಡಿದೆ. |
| 23 | ಕಾರ್ ಸ್ಟ್ರೀಟ್ ಮತ್ತು ವೆಂಕಟರಮಣ ದೇವಾಲಯ ಪ್ರದೇಶಗಳನ್ನು ಧಾರ್ಮಿಕ ವಲಯವನ್ನಾಗಿ ಪರಿವರ್ತಿಸುವ ಕಾಮಗಾರಿ | 5.00 | 1.92 | 0.00 | 1.92 | 07.01.2021 | 06.01.2022 | 30.09.2022 | 1.92 | ಕಾಮಗಾರಿಯು ಪೂರ್ಣಗೊಂಡಿದೆ. |
| 24 | ಮಂಗಳಾ ಕ್ರೀಡಾಂಗಣದ ಉನ್ನತೀಕರಣ | 10.00 | 8.58 | 0.00 | 8.58 | 02.06.2020 | 01.03.2021 | 30.09.2022 | 8.58 | ಕಾಮಗಾರಿಯು ಪೂರ್ಣಗೊಂಡಿದೆ. |
| 25 | ಪ್ರದೇಶ ಆಧಾರಿತ ಅಭಿವೃದ್ಧಿ ಪ್ರದೇಶದಲ್ಲಿ ಒಳಚರಂಡಿ ವಲಯ-4 (ಭಾಗ-2) ಮತ್ತು ವಲಯ-3 (ಭಾಗ-2 | 9.50 | 9.50 | 0.00 | 9.50 | 01.02.2019 | 31.12.2020 | 31.12.2022 | 9.50 | ಕಾಮಗಾರಿಯು ಪೂರ್ಣಗೊಂಡಿದೆ. |
| 26 | ಸ್ಮಾರ್ಟ್ ರಸ್ತೆ ಪ್ಯಾಕೇಜ್-2 (ಲೂಪ್ ರಸ್ತೆ) | 14.50 | 14.28 | 0.07 | 14.35 | 04.07.2019 | 3.12.2020 | 31.12.2022 | 14.35 | ಕಾಮಗಾರಿಯು ಪೂರ್ಣಗೊಂಡಿದೆ. |
| 27 | ಸ್ಮಾರ್ಟ್ ರಸ್ತೆ ಪ್ಯಾಕೇಜ್-4 | 48.00 | 49.00 | 0.30 | 49.30 | 16.09.2019 | 15.02.2021 | 31.12.2022 | 49.04 | ಕಾಮಗಾರಿಯು ಪೂರ್ಣಗೊಂಡಿದೆ. |
| 28 | ಕಾವೂರು ಕೆರೆಯ ಪುನಶ್ಚೇತನಗೊಳಿಸುವಿಕೆ | 8.00 | 8.39 | 0.00 | 8.39 | 27.02.2020 | 16.03.2021 | 31.12.2022 | 8.39 | ಕಾಮಗಾರಿಯು ಪೂರ್ಣಗೊಂಡಿದೆ. |
| 29 | ಅಂತರಾಷ್ಟ್ರೀಯ ಈಜುಕೊಳದೊಂದಿಗೆ ಸಮುದಾಯ ಮಟ್ಟದ ಸೌಲಭ್ಯಗಳು | 24.94 | 24.71 | 2.15 | 26.86 | 20.02.2020 | 15.02.2022 | 31.12.2023 | 23.51 | ಕಾಮಗಾರಿಯು ಪೂರ್ಣಗೊಂಡಿದೆ. |
| 30 | ವೆನ್‌ಲಾಕ್ Surgical Block ಆಸ್ಪತ್ರೆಯ ಕಾಮಗಾರಿ | 43.00 | 53.00 | 0.00 | 53.00 | 08.10.2020 | 14.10.2022 | 30.06.2023 | 52.57 | ಕಾಮಗಾರಿಯು ಪೂರ್ಣಗೊಂಡಿದೆ. |
| 31 | ಮಂಗಳೂರು ಮಹಾನಗರ ಪಾಲಿಕೆ ಬಲಬದಿಯಲ್ಲಿ ಹೆಚ್ಚುವರಿ ಕಟ್ಟಡ ನಿರ್ಮಾಣ | 5.00 | 6.30 | 0.00 | 6.30 | 13.02.2020 | 12.02.2021 | 31.10.2023 | 6.29 | ಕಾಮಗಾರಿಯು ಪೂರ್ಣಗೊಂಡಿದೆ. |
| 32 | ವೆನ್ಲಾಕ್ ಆಸ್ಪತ್ರೆಗೆ ಶಸ್ತ್ರಚಿಕಿತ್ಸೆ ಉಪಕರಣಗಳ ಪೂರೈಕೆ | 10.00 | 10.00 | 0.00 | 10.00 | 31.05.2024 | 31.07.2024 | 20.09.2024 | 10.00 | ಕಾಮಗಾರಿಯು ಪೂರ್ಣಗೊಂಡಿದೆ. |
| 33 | ತಣ್ಣೀರಬಾವಿ ಪ್ರದೇಶ ಅಭಿವೃದ್ಧಿ | 9.19 | 9.19 | 0.00 | 9.19 | 05.05.2022 | 05.05.2023 | 31.10.2024 | 8.84 | ಕಾಮಗಾರಿಯು ಪೂರ್ಣಗೊಂಡಿದೆ. |
| 34 | ಮಂಗಳಾದೇವಿ ಬಸ್ ಟರ್ಮಿನಲ್ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಅಭಿವೃದ್ಧಿ | 4.98 | 5.85 | 0.00 | 5.85 | 30.03.2022 | 30.09.2023 | 31.12.2024 | 5.84 | ಕಾಮಗಾರಿಯು ಪೂರ್ಣಗೊಂಡಿದೆ. |
| 35 | ನಿರ್ದೇಶನ ಮತ್ತು ನಿಯಂತ್ರಣ ಕೇಂದ್ರ ಅನುಷ್ಠಾನ ಹಂತ-2 | 28.89 | 20.22 | 8.67 | 28.89 | 05.05.2022 | 05.05.2023 | 31.07.2025 | 16.22 | ಕಾಮಗಾರಿಯು ಪೂರ್ಣಗೊಂಡಿದೆ. |
| 36 | ಪ್ರದೇಶ ಆಧಾರಿತ ಅಭಿವೃದ್ಧಿ ಪ್ರದೇಶದಲ್ಲಿ 100% ಒಳಚರಂಡಿ - ಪ್ಯಾಕೇಜ್ 4 | 25.70 | 27.00 | 0.00 | 27.00 | 23.08.2019 | 15.02.2021 | 15.05.2024 | 25.85 | ಕಾಮಗಾರಿಯು ಪೂರ್ಣಗೊಂಡಿದೆ. |
| 37 | ಸ್ಮಾರ್ಟ್ ರಸ್ತೆ ಪ್ಯಾಕೇಜ್-6 | 48.00 | 47.37 | 0.45 | 47.82 | 04.10.2019 | 15.03.2021 | 31.12.2024 | 48.50 | ಕಾಮಗಾರಿಯು ಪೂರ್ಣಗೊಂಡಿದೆ. |
| 38 | ಸ್ಮಾರ್ಟ್ ರಸ್ತೆ ಪ್ಯಾಕೇಜ್-3 | 47.40 | 46.90 | 0.50 | 47.40 | 19.11.2019 | 19.03.2021 | 28.02.2025 | 45.86 | ಕಾಮಗಾರಿಯು ಪೂರ್ಣಗೊಂಡಿದೆ. |
| 39 | ಸ್ಮಾರ್ಟ್ ರಸ್ತೆ ಪ್ಯಾಕೇಜ್-7 | 40.52 | 45.59 | 0.65 | 46.24 | 18.11.2019 | 18.03.2021 | 31.12.2024 | 45.59 | ಕಾಮಗಾರಿಯು ಪೂರ್ಣಗೊಂಡಿದೆ. |
| 40 | ಮಂಗಳೂರು ಮಹಾನಗರ ಪಾಲಿಕೆಗೆ ಸೇರಿದ ತುಂಬೆ ವೆಂಟೆಡ್ ಡ್ಯಾಂ ಬಳಿ ಕುಸಿದ ತಡೆಗೋಡೆ ಪುನರ್ ನಿರ್ಮಾಣ ಹಾಗೂ ಹಾಲಿ ಇರುವ ಜಾಕ್‌ವೆಲ್-2 ಪುನಶ್ಚೇತನ ಕಾಮಗಾರಿ | 10.50 | 12.43 | 0.00 | 12.43 | 25.05.2021 | 25.05.2021 | 31.03.2025 | 11.52 | ಕಾಮಗಾರಿಯು ಪೂರ್ಣಗೊಂಡಿದೆ. |
| 41 | ಉರ್ವಾ ಮಾರುಕಟ್ಟೆ ಬಳಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ | 20.54 | 39.05 | 0.00 | 39.05 | 13.08.2021 | 13.08.2023 | 31.03.2025 | 38.95 | ಕಾಮಗಾರಿಯು ಪೂರ್ಣಗೊಂಡಿದೆ. |
| 42 | ಸ್ಮಾರ್ಟ್ ರಸ್ತೆ ಪ್ಯಾಕೇಜ್-5 | 49.00 | 62.01 | 0.25 | 62.26 | 16.11.2019 | 15.03.2021 | 31.01.2026 | 58.75 | ಕಾಮಗಾರಿಯು ಪೂರ್ಣಗೊಂಡಿದೆ |
| 43 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66 ರಿಂದ ಮಹಾಕಾಳಿಪಡ್ಪು ರೈಲ್ವೆ ಕೆಳ ಸೇತುವೆ ಮುಖಾಂತರ ಮೋರ್ಗನ್ಸ್ ಗೇಟ್ ಜಂಕ್ಷನ್ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ | 19.95 | 21.88 | 0.00 | 21.88 | 18.03.2021 | 17.03.2022 | 31.01.2026 | 19.42 | |
| 44 | ಕೇಂದ್ರ ಮಾರುಕಟ್ಟೆಯ ಪುನರ್ವಸತಿ - ಫುಟ್‌ಬಾಲ್ ಕ್ರೀಡಾಂಗಣದ ಉನ್ನತೀಕರಣ ಮತ್ತು ಕುಸ್ತಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿ | 6.24 | 4.50 | 0.00 | 4.50 | 21.01.2025 | 21.07.2025 | 31.03.2026 | 2.82 | |
| | **ಒಟ್ಟು 44 ಯೋಜನೆಗಳು ಪೂರ್ಣಗೊಂಡಿದೆ** | **635.90** | **621.48** | **27.25** | **648.73** | | | | 612.59 | |

## ಠೇವಣಿ ಯೋಜನೆಗಳು

| ಕ್ರಸಂ | ಕಾಮಗಾರಿಯ ಹೆಸರು | ಠೇವಣಿ ಮೊತ್ತ | | O&M Cost | ಒಟ್ಟು CAPEX+OPEX | ಕಾರ್ಯಾದೇಶ ನೀಡಿದ ದಿನಾಂಕ | ಕರಾರು ಪತ್ರದ ಪ್ರಕಾರ ಕಾಮಗಾರಿ ಮುಕ್ತಾಯದ ದಿನಾಂಕ | ವಾಸ್ತವಿಕವಾಗಿ ಕಾಮಗಾರಿ ಪೂರ್ಣಗೊಂಡ ದಿನಾಂಕ | ಒಟ್ಟು ವೆಚ್ಚ | ಷರಾ |
|---|---|---|---|---|---|---|---|---|---|---|
| 1 | ಕರ್ನಾಟಕ ಮುನ್ಸಿಪಲ್ ಡಾಟಾ ಸೆಂಟರ್ (ಕೆಎಮ್‌ಡಿಎಸ್), ಬೆಂಗಳೂರು ಸಾಮಾನ್ಯ ದತ್ತಾಂಶ ಕೇಂದ್ರ | 11.88 | 11.88 | 0.00 | 11.88 | 28.02.2019 | 28.08.2019 | | 11.88 | ಕಾಮಗಾರಿ ಪ್ರಗತಿಯಲ್ಲಿದೆ. |
| 2 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ 24X7 ನೀರು ಸರಬರಾಜು ಯೋಜನೆ ಅನುಷ್ಠಾನಕ್ಕಾಗಿ ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಠೇವಣಿ ಕೊಡುಗೆ | 114.00 | 114.00 | 0.00 | 114.00 | 24.12.2019 | 24.12.2021 | 31.12.2025 | 114.00 | ಕಾಮಗಾರಿ ಪ್ರಗತಿಯಲ್ಲಿದೆ. |
| 3 | ರಾಷ್ಟ್ರೀಯ ಹೆದ್ದಾರಿ-66 ನಲ್ಲಿ ಜೆಪ್ಪುವಿನಿಂದ ಮೋರ್ಗನ್ಸ್‌ಗೇಟ್ ಜಂಕ್ಷನ್‌ವರೆಗೆ ಮಹಾಕಾಳಿಪಡ್ಪು RUB ಮುಖಾಂತರ ಸಂಪರ್ಕ ರಸ್ತೆ ನಿರ್ಮಿಸುವ ಕಾಮಗಾರಿ | 29.94 | 29.94 | 0.00 | 29.94 | 21.07.2022 | 31.12.2024 | | 29.94 | ಕಾಮಗಾರಿಯು ಪೂರ್ಣಗೊಂಡಿದೆ. |
| 4 | ಸ್ಟೇಟ್ ಬ್ಯಾಂಕ್‌ನಲ್ಲಿ ಸರ್ವಿಸ್ ಬಸ್ ನಿಲ್ದಾಣದ ನಿರ್ಮಾಣಕ್ಕಾಗಿ ಮಂಗಳೂರು ಮಹಾನಗರ ಪಾಲಿಕೆಗೆ ಠೇವಣಿ ಕೊಡುಗೆ | 2.20 | 2.20 | 0.00 | 2.20 | 2022 | | | 2.20 | ಕಾಮಗಾರಿ ಪೂರ್ಣಗೊಂಡಿದೆ |
| 5 | ವೆಟ್‌ವೆಲ್ ನಿರ್ಮಾಣ ಕಾಮಗಾರಿಗಾಗಿ ಮಂಗಳೂರು ಮಹಾನಗರ ಪಾಲಿಕೆಗೆ ಠೇವಣಿ ಕೊಡುಗೆ | 14.26 | 14.26 | 0.00 | 14.26 | 2024 | | | 14.26 | ಕಾಮಗಾರಿ ಪ್ರಗತಿಯಲ್ಲಿದೆ. |
| 6 | ಅಡ್ಯಾರ್ ಜ್ಯಾಕ್‌ವೆಲ್ ಕಾಮಗಾರಿಗೆ ಮಂಗಳೂರು ಮಹಾನಗರ ಪಾಲಿಕೆಗೆ ಠೇವಣಿ ಕೊಡುಗೆ | 23.00 | 23.00 | 0.00 | 23.00 | 2024 | | | 23.00 | ಕಾಮಗಾರಿ ಪ್ರಗತಿಯಲ್ಲಿದೆ. |
| 7 | ಜಿಲ್ಲಾಧಿಕಾರಿ ಕಛೇರಿ ಕಾಮಗಾರಿಗೆ ಠೇವಣಿ ಕೊಡುಗೆ | 20.00 | 20.00 | 0.00 | 20.00 | 2024 | | | 20.00 | ಕಾಮಗಾರಿ ಪೂರ್ಣಗೊಂಡಿದೆ |
| 8 | ಸ್ಟೇಟ್ ಬ್ಯಾಂಕ್‌ನಲ್ಲಿ ಸರ್ವಿಸ್ ಬಸ್ ನಿಲ್ದಾಣದ ನಿರ್ಮಾಣಕ್ಕಾಗಿ ಮಂಗಳೂರು ಮಹಾನಗರ ಪಾಲಿಕೆಗೆ ಠೇವಣಿ ಕೊಡುಗೆ – 2ನೇ ಕಂತು | 3.00 | 3.00 | 0.00 | 3.00 | 2024 | | | 3.00 | ಕಾಮಗಾರಿ ಪ್ರಗತಿಯಲ್ಲಿದೆ. |
| 9 | ಕದ್ರಿ ಹಾಗೂ ಟಾಗೋರ್ ಉದ್ಯಾನವನದಲ್ಲಿ ಧ್ವಜಸ್ತಂಭ ನಿರ್ಮಾಣ ಕಾಮಗಾರಿ | 1.50 | 1.50 | 0.00 | 1.50 | 2024 | | | 1.50 | ಕಾಮಗಾರಿ ಪ್ರಗತಿಯಲ್ಲಿದೆ. |
| 10 | ಡ್ರೋನ್ ಖರೀದಿಗೆ ಪೋಲಿಸ್ ಇಲಾಖೆಗೆ ಠೇವಣಿ ಕೊಡುಗೆ | 0.30 | 0.30 | 0.00 | 0.30 | 2024 | | | 0.30 | ಕಾಮಗಾರಿ ಪೂರ್ಣಗೊಂಡಿದೆ |
| | **ಒಟ್ಟು 10 ಠೇವಣಿ ಕೊಡುಗೆ ಯೋಜನೆಗಳು** | **220.08** | **220.08** | **0.00** | **220.08** | | | | **220.08** | |
| | **ಒಟ್ಟು 54(ಪೂರ್ಣಗೊಂಡ ಯೋಜನೆಗಳು + ಠೇವಣಿ ಕೊಡುಗೆ** | **855.98** | **841.56** | **27.25** | **868.81** | | | | **832.67** | |

## ಪ್ರಗತಿಯಲ್ಲಿರುವ ಕಾಮಗಾರಿಗಳು

| ಕ್ರಸಂ | ಕಾಮಗಾರಿಯ ಹೆಸರು | DPR ಮೊತ್ತ | ಕಾರ್ಯಾದೇಶ ಮೊತ್ತ | O&M Cost | ಒಟ್ಟು CAPEX+OPEX | ಕಾರ್ಯಾದೇಶ ನೀಡಿದ ದಿನಾಂಕ | ಕರಾರು ಪತ್ರದ ಪ್ರಕಾರ ಕಾಮಗಾರಿ ಮುಕ್ತಾಯದ ದಿನಾಂಕ | ಕಾಮಗಾರಿಯು ಪೂರ್ಣಗೊಳ್ಳಲು ಪ್ರಸ್ತುತವಾಗಿ ನೀಡಲಾಗಿರುವ ಅವಧಿ | ಒಟ್ಟು ವೆಚ್ಚ (ಕೋಟಿಗಳಲ್ಲಿ) | ಪ್ರಸ್ತುತ ಸ್ಥಿತಿ |
|---|---|---|---|---|---|---|---|---|---|---|
| 1 | ಜಲಾಭಿಮುಖ ಪ್ರದೇಶ ಅಭಿವೃದ್ಧಿ ಹಂತ | 59.40 | 32.72 | 0.00 | 32.72 | 05.05.2022 | 05.05.2023 | 30.06.2026 | 15.43 | District Court Case :<br>OS 992/2023, 1072/2023 & 874/2024<br>National Green Tribunal :<br>Application No 52 of 2024 (SZ), OA 191/2024 and OA 387/2024 (PB)<br>ಅಂತಿಮ ವಿಚಾರಣೆಯನ್ನು ಇನ್ನೂ ನಿಗದಿಪಡಿಸಲಾಗಿಲ್ಲ. |

| | | | | | | | | | | |
|---|---|---|---|---|---|---|---|---|---|---|
| 2 | ಸುಲ್ತಾನ್ ಬತ್ತೇರಿ ಪ್ರದೇಶದಲ್ಲಿ ಸೇತುವೆ ನಿರ್ಮಾಣ ಹಾಗೂ ರ್‍ಯಾಂಪ್ ನಿರ್ಮಾಣ | 59.79 | 63.80 | 0.00 | 63.80 | 19.11.2024 | 19.05.2026 | 30.06.2026 | 50.87 | 100 ಮೀಟರ್ ಉದ್ದದ ಸ್ಟೀಲ್ ಬೋ-ಸ್ಟ್ರಿಂಗ್ ಸ್ಥಾಪನೆ ತಯಾರಿಕಾ ಕಾರ್ಯ ಪ್ರಗತಿಯಲ್ಲಿದೆ. Soil filling, Pile cap, precast RCC girder placing, dredging ಕಾಮಗಾರಿ ಪ್ರಗತಿಯಲ್ಲಿದೆ. ಸದ್ರಿ ಕಾಮಗಾರಿಗೆ ದಿನಾಂಕ:19.11.2024 ರಂದು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಅವಧಿಯು 18 ತಿಂಗಳುಗಳಾಗಿದೆ. ಮಳೆಗಾಲ ಆರಂಭವಾಗುವ ಮೊದಲು ಕಾಮಗಾರಿಯನ್ನು ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು. |
| ಒಟ್ಟು 2 ಪ್ರಗತಿಯಲ್ಲಿರುವ ಯೋಜನೆಗಳು | | 119.19 | 96.52 | 0.00 | 96.52 | | | | 66.30 | |
| ಒಟ್ಟು 56 ಯೋಜನೆಗಳು | | 975.17 | 938.08 | 27.25 | 965.33 | | | | 898.97 | |

**ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಕಾಮಗಾರಿ**

**ಪ್ರಗತಿಯಲ್ಲಿರುವ ಕಾಮಗಾರಿ**

| ಕ್ರ.ಸಂ | ಕಾಮಗಾರಿಯ ಹೆಸರು | ಕಾಮಗಾರಿಯ ಮೊತ್ತ | ಕರಾರು ಪತ್ರದ ಪ್ರಕಾರ ಕಾಮಗಾರಿಯ ಮುಕ್ತಾಯದ ದಿನಾಂಕ | ಕಾಮಗಾರಿಯು ಪೂರ್ಣಗೊಳಿಸಲು ವಾಸ್ತವವಾಗಿ ಬೇಕಾಗಿರುವ ಅವಧಿ | ಕಾರ್ಯಾದೇಶ ನೀಡಿದ ದಿನಾಂಕ | ಪ್ರಸ್ತುತ ಸ್ಥಿತಿ |
|---|---|---|---|---|---|---|
| 1 | ಪ್ರದೇಶ ಆಧಾರಿತ ವ್ಯಾಪ್ತಿಯಲ್ಲಿನ ಸರ್ಕಾರಿ ಕಟ್ಟಡಗಳ ಮೇಲ್ಛಾವಣಿ ಸೋಲಾರ್ ಪ್ಯಾನಲ್ ಅಳವಡಿಕೆ | 7.08 | 30.04.2021 | 31.03.2026 | 30.07.18 | ಒಟ್ಟು 1288 kW ವಿದ್ಯುತ್ ಉತ್ಪಾದನೆಯ ಗುರಿ ನಿಗದಿ ಪಡಿಸಲಾಗಿದ್ದು, ಪ್ರಸ್ತುತ 705kW ಮಾತ್ರ ಉತ್ಪಾದನೆಯಾಗುತ್ತಿದೆ. (ವೆನ್ಲಾಕ್ ಆಸ್ಪತ್ರೆ, ಮಂಗಳೂರು ಮಹಾನಗರ ಪಾಲಿಕೆ ಕಟ್ಟಡ, ಟೌನ್ ಹಾಲ್ ಮತ್ತು ಮಲ್ಲಿಕಟ್ಟೆಯ ಎಂ.ಸಿ.ಸಿ ಕಟ್ಟಡಕ್ಕೆ ಚಾಲನೆ ನೀಡಲಾಗಿದೆ. ಕೆಎಫ್‌ಡಿಸಿ ಕಟ್ಟಡದ ಫಲಕಗಳನ್ನು ನಿರ್ಮಿಸಲಾಗಿದೆ) ಅದರಂತೆ ಜಿಲ್ಲಾ ಪಂಚಾಯತ್ ಕಟ್ಟಡ, ಪಿಲಿಕುಳ ಮತ್ತು ಎಪಿಎಮ್‌ಸಿ ಕಟ್ಟಡಗಳ ಮೇಲ್ಛಾವಣಿಯಲ್ಲಿ ಸೋಲಾರ್ ಪ್ಯಾನಲ್ ಅಳವಡಿಕೆ ಬಾಕಿ ಇರುತ್ತದೆ. |
| 2 | ಹಂಪನ್ ಕಟ್ಟೆ ಹಳೆ ಬಸ್ ನಿಲ್ದಾಣ ಪ್ರದೇಶದಲ್ಲಿನ ಬಹುಮಹಡಿ ವಾಣಿಜ್ಯ ಸಂಕೀರ್ಣ, ಬಹುಮಹಡಿ ವಾಹನ ನಿಲುಗಡೆ ಕಾಮಗಾರಿ | 79.05 | 25.08.2024 | 25.08.2026 | 25.08.2021 | ನೆಲ ಅಂತಸ್ತು ಕಾಮಗಾರಿ ಪ್ರಗತಿಯಲ್ಲಿದೆ |
| 3 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಿದ್ಯುತ್ ಬೀದಿದೀಪಗಳನ್ನು ಎಲ್.ಇ.ಡಿ ದೀಪಗಳನ್ನಾಗಿ ಬದಲಾಯಿಸುವುದು | 62.63 | 24.10.2021 | 31.03.2026 | 23.02.2022 | ಎಲ್.ಇ.ಡಿ ದೀಪ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದ್ದು, ಒಟ್ಟು 17,100 ಎಲ್.ಇ.ಡಿ. ದೀಪಗಳನ್ನು ಅಳವಡಿಸಲಾಗಿದೆ. |
| 4 | ಕೇಂದ್ರ ಮಾರುಕಟ್ಟೆ ಹಾಗೂ ಮೀನು ಮಾರುಕಟ್ಟೆ ಮರು ನಿರ್ಮಾಣ | 114.03 | 16.01.2026 | 31.03.2026 | 16.01.2023 | ಮುಕ್ತಾಯ ಹಂತದ ಕಾಮಗಾರಿ ಪ್ರಗತಿಯಲ್ಲಿದೆ. |
| ಒಟ್ಟು | | 262.79 | | | | |